# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಪ್ರವೇಶಾತಿ ವಿಭಾಗ

---

ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/ 92ಬಿ/ 2024-25 ದಿನಾಂಕ: 09.10.2024

**ಸುತ್ತೋಲೆ:**

ವಿಷಯ: ಎರಡು / ಮೂರನೇ ಯುಜಿ / ಪಿಜಿ ಶೈಕ್ಷಣಿಕ ಕಾರ್ಯಕ್ರಮಗಳ ನೇರ ಪ್ರವೇಶಾತಿ ಮಾರ್ಗಸೂಚಿಗಳು :

ಉಲ್ಲೇಖ:1.ವಿವಿ ಪ್ರವೇಶಾತಿ ಅಧಿಸೂಚನೆ ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/121/24-25, ದಿನಾಂಕ: 20.07.2024

2. 2024-25ರ ಜುಲೈ ಆವೃತ್ತಿಯ ಪ್ರವೇಶಾತಿಯ ವಿವರಣಾ ಪುಸ್ತಕ
3. ದಿನಾಂಕ:30.07.2024ರ ಸಮೀಕರಣ ಸಮಿತಿ ಸಭೆಯ ತೀರ್ಮಾನ
4. ದಿನಾಂಕ:16.08.2024 ರಂದು ನಡೆದ ಶೈಕ್ಷಣಿಕ ಮಂಡಳಿಯ ವಿಶೇಷ ಸಭೆಯ ತೀರ್ಮಾನ.
5. ದಿನಾಂಕ:17.08.2024 ರಂದು ನಡೆದ 179ನೇ ಬಿಓಎಂ ಸಭೆಯ ತೀರ್ಮಾನ.
6. ವಿವಿ ಆದೇಶದ ಸಮಸಂಖ್ಯೆ ದಿನಾಂಕ:28.08.2024
7. ದಿನಾಂಕ:03,25/26.09.24ರಲ್ಲಿ ನಡೆದ ಉಪಸಮಿತಿ ಸಭೆಗಳ ತೀರ್ಮಾನ
8. Draft Ordinance Governing Lateral Entry admission in KSOU.
9. ದಿನಾಂಕ: 08.10.24ರಂದು ನಡೆದ ಶೈಕ್ಷಣಿಕ ಮಂಡಳಿಯ 63ನೇ ಸಾಮಾನ್ಯ ಸಭೆಯ ತೀರ್ಮಾನ.
9. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 09.10.2024

*******

ಮೊದಲನೇ ಯುಜಿ / ಪಿಜಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಇತರೆ ವಿಶ್ವವಿದ್ಯಾನಿಲಯಗಳಲ್ಲಿ (ಎನ್ಇಪಿ / ನಾನ್ ಎನ್ಇಪಿ / ಇತರೆ.. ಸ್ಕೀಂನಡಿ) ವ್ಯಾಸಂಗ ಮಾಡಿ ತಮ್ಮ ವಿದ್ಯಾಭ್ಯಾಸವನ್ನು ಪೂರ್ಣ ಗೊಳಸಿಕೊಳ್ಳಲಾಗದ ವಿದ್ಯಾರ್ಥಿಗಳಿಗೆ ಪದವಿಯನ್ನು ಪೂರ್ಣಗೊಳಿಸಿಕೊಳ್ಳಲು ಅವಕಾಶ ಕಲ್ಪಿಸುವ ಸಂಬಂಧದಲ್ಲಿ ಶಾಸನಬದ್ಧ ಪ್ರಾಧಿಕಾರಗಳ ತೀರ್ಮಾನದ ಮೇರೆಗೆ ರಚಿಸಲ್ಪಟ್ಟಿರುವ ಕರಡು ಆಧ್ಯಾದೇಶಕ್ಕೆ ದಿನಾಂಕ:08.10.2024ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯು ಅನುಮೋದನೆ ನೀಡಿರುತ್ತದೆ. ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ನೇರ ಪ್ರವೇಶಾತಿಗೆ ಅವಕಾಶ ಕಲ್ಪಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2024-25ರ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿಯಿಂದ ಜಾರಿಗೆ ಬಂದಂತೆ ಎರಡು/ಮೂರನೇ ಸಾಲಿನ ಯುಜಿ/ಪಿಜಿ ಶಿಕ್ಷಣಕ್ರಮಗಳ ನೇರ ಪ್ರವೇಶಾತಿಗೆ ಕೆಳಕಂಡ ಮಾರ್ಗಸೂಚಿಯ ಕ್ರಮಗಳನ್ನು ಅನುಸರಿಸಲು ತಿಳಿಸಿದೆ.

1. ನೇರ ಪ್ರವೇಶಾತಿ ಸೌಲಭ್ಯವು ವಿವಿ ನಿಲಯದ ಕೇಂದ್ರ ಕಛೇರಿ ಮೈಸೂರು ಅಥವಾ ಹತ್ತಿರದ ಪ್ರಾದೇಶಿಕ ಕೇಂದ್ರಗಳಲ್ಲಿ ಮಾತ್ರ ಲಭ್ಯವಿರುತ್ತದೆ.
2. ಕೆಲವು ಆಯ್ದ ವಿಷಯಗಳಲ್ಲಿ ಮೂರು ವರ್ಷಗಳ ಡಿಪ್ಲೋಮಾ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ಷರತ್ತಿಗೊಳಪಟ್ಟು ಎರಡನೇ ಬಿ.ಕಾಂ / ಎರಡನೇ ಬಿ.ಎಸ್ಸಿ – ಐಟಿ ಶಿಕ್ಷಣಕ್ರಮಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಪ್ರವೇಶ ಪಡೆಯಲು ಅವಕಾಶವಿದ್ದು ಅಂತಹ ವಿದ್ಯಾರ್ಥಿಗಳೂ ಸಹ ಈ ಕ್ರಮಗಳನ್ನು ಅನುಸರಿಸುವುದು (ಹೆಚ್ಚಿನ ಮಾಹಿತಿಗೆ ವಿವಿಯ ಅಂತರ್ಜಾಲ {www.ksoumysuru.ac.in}ದಲ್ಲಿ ಲಭ್ಯವಿರುವ ಆಯಾ ಶಿಕ್ಷಣಕ್ರಮದ ವಿವರಣಾ ಪುಸ್ತಕಗಳನ್ನು ವೀಕ್ಷಿಸುವುದು).
3. ನೇರ ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು ವಿವಿ ನಿಲಯವು ಆಯಾ ಶೈಕ್ಷಣಿಕ ಸಾಲಿನಲ್ಲಿನ ಆವೃತ್ತಿಗೆ ನಿಗದಿಪಡಿಸಿದ ಅಂತಿಮ ದಿನಾಂಕಕ್ಕೆ ಕನಿಷ್ಟ 15 ದಿನಗಳ ಮುಂಚಿತವಾಗಿ ತಮ್ಮ ಅರ್ಜಿಗಳನ್ನು ಕಳುಹಿಸಿರಬೇಕು.
4. ಚಾಲ್ತಿ ಶಿಕ್ಷಣ ನೀತಿಯನ್ವಯ ವಿದ್ಯಾರ್ಥಿಯು ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದ ಹಂತದಿಂದಲೇ ಪೂರ್ಣಗೊಳಿಸಿಕೊಳ್ಳಲು ಅವಕಾಶ ಕಲ್ಪಿಸುವ ದೃಷ್ಟಿಯಿಂದ ಪ್ರಸಕ್ತ ಶೈಕ್ಷಣಿಕ ಸಾಲಿನಿಂದ 15 ವರ್ಷಗಳ ಹಿಂದಿನ ವಿದ್ಯಾರ್ಥಿಗಳು ಅಂದರೆ 2009-10ನೇ ಶೈಕ್ಷಣಿಕ ಸಾಲಿನಿಂದ ತಮ್ಮ ವಿದ್ಯಾಭ್ಯಾಸವನ್ನು ಪ್ರಾರಂಭಿಸಿ ಕಾರಣಾಂತರದಿಂದ ಪೂರ್ಣಗೊಳಿಸಿಕೊಳ್ಳಲಾಗದ ವಿದ್ಯಾರ್ಥಿಗಳು ಕರಾಮುವಿಯ ನೇರ ಪ್ರವೇಶಾತಿ ನೀತಿಗೊಳಪಟ್ಟು ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತಾರೆ (ಈ ಅವಕಾಶಕ್ಕೆ ಮುಂದಿನ ಪ್ರತೀ ಶೈಕ್ಷಣಿಕ ಸಾಲಿನಲ್ಲಿ 15 ವರ್ಷಗಳ ಹಿಂದಿನ ವಿದ್ಯಾರ್ಥಿಗಳನ್ನು ಪರಿಗಣಿಸುವುದು. ಉದಾ: 2025-26ರ ಪ್ರವೇಶಾತಿಯಲ್ಲಿ 2010-11ರಿಂದ ವಿದ್ಯಾರ್ಥಿಗಳನ್ನು ಪರಿಗಣಿಸುವುದು).
5. ನೇರ ಪ್ರವೇಶಾತಿಯು ಆಯಾ ವಿದ್ಯಾರ್ಥಿಗಳು ತಮ್ಮ ಪ್ರವೇಶಾತಿ ತರಗತಿಗಳ ವಿಷಯಗಳು/ಪತ್ರಿಕೆಗಳು/ಕೋರ್ಸುಗಳನ್ನು ಮ್ಯಾಚ್ ಮಾಡಿಕೊಳ್ಳುವ ಸಲುವಾಗಿ ವಿವಿ ನಿಲಯವು ಸೂಚಿಸುವ ಹೆಚ್ಚುವರಿ ಕೋರ್ಸು (ಪತ್ರಿಕೆ / ವಿಷಯಗಳು) ಗಳನ್ನು ಅಧ್ಯಯನ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.
6. ನೇರ ಪ್ರವೇಶಾತಿಗೆ ವಿದ್ಯಾರ್ಥಿಗಳು ಪ್ರಾಥಮಿಕವಾಗಿ ಆಯಾ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ನಿಗದಿಪಡಿಸಿರುವ ಪ್ರವೇಶಾತಿ ಪ್ರಕ್ರಿಯೆ ಶುಲ್ಕದ ಜೊತೆಗೆ ರೂ:500/- ಅನ್ನು ಹೆಚ್ಚುವರಿ ಶುಲ್ಕವಾಗಿ ಆನ್‌ಲೈನ್ ಮೂಲಕ ಪಾವತಿಸಬೇಕು.
7. ನೇರ ಪ್ರವೇಶಾತಿ ಬಯಸುವ ವಿದ್ಯಾರ್ಥಿಯು ತಮ್ಮ ಎಲ್ಲಾ ಶೈಕ್ಷಣಿಕ ದಾಖಲಾತಿಗಳೊಂದಿಗೆ ಹತ್ತಿರದ ಪ್ರಾದೇಶಿಕ ಕೇಂದ್ರಗಳಿಗೆ ಭೇಟಿ ನೀಡಿ, ದಾಖಲಾತಿಗಳ ಪರಿಶೀಲನೆಯ ನಂತರ

ಆನ್‌ಲೈನ್ ಮೂಲಕ ನಿಗದಿತ ಅರ್ಜಿಯಲ್ಲಿ ತನ್ನ ಶೈಕ್ಷಣಿಕ ವಿವರಗಳನ್ನು ದಾಖಲಿಸಿ, ಎಲ್ಲಾ ಅಂಕಪಟ್ಟಿಗಳು, ಆಧಾರ್ ಕಾರ್ಡ್, ಪೂರ್ವ ಶಿಕ್ಷಣ ಸಂಸ್ಥೆ/ವಿವಿ ನಿಲಯಗಳಿಂದ ಪಡೆದ ಆಕ್ಷೇಪಣಾ ರಹಿತ ಪತ್ರ (NOC) ಹಾಗೂ ವಲಸೆ ಪ್ರಮಾಣ ಪತ್ರ (Migration Certificate)ಗಳು, ತನ್ನ ಭಾವಚಿತ್ರ ಹಾಗೂ ಸಹಿಯನ್ನು ಸ್ಕ್ಯಾನ್ ಮಾಡಿ ವಿವಿಯ ಪ್ರವೇಶಾತಿ ಪೋರ್ಟಲ್ (admission portal – https://ksouportal.com/) ನಲ್ಲಿ ಅಪ್ ಲೋಡ್ ಮಾಡಿ, ನಿಗದಿತ ಪ್ರವೇಶಾತಿ ಪ್ರಕ್ರಿಯೆ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿ, ಅಪ್‌ಲೋಡ್ ಆದ ಎಲ್ಲಾ ದಾಖಲಾತಿಗಳನ್ನು ಆಯಾ ಪ್ರಾದೇಶಿಕ ಕೇಂದ್ರಗಳಲ್ಲಿ ಸಲ್ಲಿಸುವುದು.

8. ಆಯಾ ಪ್ರಾದೇಶಿಕ ಕೇಂದ್ರಗಳ ನಿರ್ದೇಶಕರುಗಳು ಕೂಡಲೇ ವಿದ್ಯಾರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಿ ತಮ್ಮ ಪ್ರಾಥಮಿಕ ಶಿಫಾರಸ್ಸಿನೊಂದಿಗೆ (ಕ್ರ.ಸಂ 4ರ ಷರತ್ತಿಗೊಳಪಟ್ಟು), ವಿದ್ಯಾರ್ಥಿಗಳ ನೇರ ಪ್ರವೇಶಾತಿ ಅರ್ಜಿಗಳನ್ನು 'ನಿರ್ದೇಶಕರು (ಪ್ರವೇಶಾತಿ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570 006' ಇವರಿಗೆ ಕಳುಹಿಸುವುದು.

9. ಪ್ರಾದೇಶಿಕ ಕೇಂದ್ರಗಳಿಂದ ಬಂದ ಈ ಅರ್ಜಿಗಳನ್ನು ಪ್ರವೇಶಾತಿ ವಿಭಾಗವು ಶೀಘ್ರವಾಗಿ ಶಿಕ್ಷಣಕ್ರಮವಾರು ಪಟ್ಟಿ ಮಾಡಿ, ಆಯಾ ವಿಷಯಗಳ ನಿಕಾಯಗಳ ನಿರ್ದೇಶಕರುಗಳಿಗೆ ಪರಿಶೀಲನೆಗೆ ಕಳುಹಿಸಿ, ಅವರ ಶಿಫಾರಸ್ಸು/ ರಿಮಾರ್ಕ್ಸ್‌ನೊಂದಿಗೆ ಪಟ್ಟಿ ಮಾಡಿ, ಲ್ಯಾಟರಲ್ ಎಂಟ್ರಿ ಅಡ್ಮಿಷನ್ ಕಮಿಟಿಗೆ ಮಂಡಿಸುವುದು.

10. ಲ್ಯಾಟರಲ್ ಎಂಟ್ರಿ ಅಡ್ಮಿಷನ್ ಕಮಿಟಿಯು ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲಾತಿಗಳು ಹಾಗೂ ಆಯಾ ನಿಕಾಯದ ನಿರ್ದೇಶಕರ ಶಿಫಾರಸ್ಸು / ರಿಮಾರ್ಕ್ಸ್‌ನೊಂದಿಗೆ ಪರಿಶೀಲಿಸಿ ತನ್ನ ವರದಿಯನ್ನು ಕುಲಸಚಿವರ ಮೂಲಕ ಮಾನ್ಯ ಕುಲಪತಿಗಳ ಅನುಮೋದನೆಗೆ ಸಲ್ಲಿಸುವುದು.

11. ಪ್ರವೇಶಾತಿ ವಿಭಾಗವು ಸದರಿ ವರದಿಗೆ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು, ಮಾಹಿತಿಯನ್ನು ಆಯಾ ಪ್ರಾದೇಶಿಕ ಕೇಂದ್ರಗಳ ನಿರ್ದೇಶಕರುಗಳಿಗೆ ತಿಳಿಸುವುದು.

12. ಆಯಾ ಪ್ರಾದೇಶಿಕ ಕೇಂದ್ರಗಳ ನಿರ್ದೇಶಕರುಗಳು ಈ ಬಗ್ಗೆ ವಿದ್ಯಾರ್ಥಿಗೆ ಮಾಹಿತಿ ನೀಡಿ, ಪ್ರವೇಶಾತಿಯ ಅಂತಿಮ ಪ್ರಕ್ರಿಯೆಗೆ ಪ್ರಾದೇಶಿಕ ಕೇಂದ್ರಕ್ಕೆ ಶೀಘ್ರವಾಗಿ ಭೇಟಿ ನೀಡುವಂತೆ ತಿಳಿಸಿ, ಮೂಲ ದಾಖಲಾತಿಗಳನ್ನು ಪರಿಶೀಲಿಸಿ ಆಯಾ ಶಿಕ್ಷಣಕ್ರಮವಾರು ನಿಗದಿಪಡಿಸಿರುವ ಪ್ರವೇಶಾತಿ ಶುಲ್ಕ ಹಾಗೂ ಅರ್ಹತಾ ಶುಲ್ಕವನ್ನು ಪಾವತಿಸಿಕೊಂಡು ಮುಂದಿನ ಅಗತ್ಯ ಕ್ರಮವಹಿಸುವುದು.

13. ಪ್ರವೇಶಾತಿಗೆ ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ವಿವಿ ನಿಲಯವು ಕಾಯ್ದಿರಿಸಿ ಕೊಂಡಿರುತ್ತದೆ ಹಾಗೂ ನೇರ ಪ್ರವೇಶಾತಿಗೆ ಅನುಮತಿಸದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪ್ರಕ್ರಿಯೆ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ.

ಆದೇಶದ ಮೇರೆಗೆ

09/10/2024

ಕುಲಸಚಿವ

ಗೆ:

1. ಉಪಕುಲಸಚಿವರು, ಪ್ರವೇಶಾತಿ, ಕರಾಮುವಿ, ಮೈಸೂರು.
2. ಪ್ರಾದೇಶಿಕ ನಿರ್ದೇಶಕರು, ಕರಾಮುವಿಯ ಎಲ್ಲಾ ಪ್ರಾದೇಶಿಕ ಕೇಂದ್ರಗಳು – ಮೇಲ್ ಮೂಲಕ.
3. ಸಂಯೋಜನಾಧಿಕಾರಿಗಳು, ಕರಾಮುವಿ ಕಲಿಕಾರ್ಥಿ ಸಹಾಯ ಕೇಂದ್ರಗಳು – ಈ ಕುರಿತು ಮಾಹಿತಿ ಕೋರಿ ಬರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಪ್ರಾದೇಶಿಕ ಕೇಂದ್ರಗಳಿಗೆ ಕಳುಹಿಸುವುದು.
4. ಇನ್‌ಹಾಕ್ ಐಟಿ ಸಲ್ಯೂಷನ್ಸ್, ಬೆಂಗಳೂರು – ಆನ್‌ಲೈನ್ ಪ್ರವೇಶಾತಿ ತಂತ್ರಾಂಶದಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸುವುದು.

ಪ್ರತಿ:

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
3. ಲ್ಯಾಟರಲ್ ಎಂಟ್ರಿ ಅಡ್ಮಿಷನ್ ಕಮಿಟಿಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ – ಮೇಲ್ ಮೂಲಕ
4. ಎಲ್ಲಾ ನಿಕಾಯಗಳ ನಿರ್ದೇಶಕರುಗಳಿಗೆ – ಮೇಲ್ ಮೂಲಕ
5. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ ಮಾಹಿತಿಗಾಗಿ – ಮೇಲ್ ಮೂಲಕ
6. ಎಲ್ಲಾ ಉಪಕುಲಸಚಿವರು / ಸಹಾಯಕ ಕುಲಸಚಿವರು, ಕರಾಮುವಿ – ಮೇಲ್ ಮೂಲಕ
7. ಎಲ್ಲಾ ವಿಭಾಗಗಳ ನಿರ್ದೇಶಕರು / ಸಂಯೋಜನಾಧಿಕಾರಿಗಳು ಕರಾಮುವಿ – ಮೇಲ್ ಮೂಲಕ
8. ಡಾ; ನವೀನ್ ಕುಮಾರ್, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ ಇವರಿಗೆ ಸದರಿ ಸುತ್ತೋಲೆ ಹಾಗೂ ಆಧ್ಯಾದೇಶವನ್ನು ವಿವಿಯ ಅಂತರ್ಜಾಲದಲ್ಲಿ ಪ್ರಕಟಿಸುವುದು.
9. ಸೂಚನಾ ಫಲಕಕ್ಕೆ
10. ಕಚೇರಿ ಪ್ರತಿ.